# ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಅರಸೀಕೆರೆ.

**ಸಿ.ಸಿ. 540/17**

ಫಿರ್ಯಾದುದಾರರು : ಶಿವರಾಜ್

:- ವಿರುದ್ಧ :-

ಆರೋಪಿತರು ಡಿ.ಆನಂದ್ ಕೌಶಿಕ್ ಬಿನ್ ದತ್ತಾತ್ರಯ 43 ವರ್ಷ,
ಕರಿಯಮ್ಮ ದೇವಸ್ಥಾನದ ಎದುರು.
ಅರಸೀಕೆರೆ ತಾಲ್ಲೂಕು.

## :: ದೋಷಾರೋಪಣೆ ::

ನಿರ್ಮಲ, ಕೆ. ಬಿ.ಎ, ಎಂ.ಎಲ್, ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಅರಸೀಕೆರೆ ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಆರೋಪಿಸುವುದೇನೆಂದರೆ :-

ಆರೋಪಿಯಾದ ನೀವು ಅರಸೀ ವಾರ್ತೆ ಎಂಬ ಪಾಕ್ಷಿಕ ಪತ್ರಿಕೆಯ ಸಂಪಾದಕರಾಗಿದ್ದು ಜನವರಿ-2016 ರ ಪತ್ರಿಕೆಯ ಪುಟ 14 ರಲ್ಲಿ ಪಿರ್ಯಾದಿ ಹಾಗೂ ಇತರರ ಮೇಲೆ ಆರೋಪ ಮಾಡಿ " ಮಿಸ್ಟರ್ ವಿಜಯಕುಮಾರ್ ಅಂಡ್ ಪಟಾಲಂ ಎಷ್ಟೇ ಅರ್ಜಿ ಸಲ್ಲಿಸಿದರೂ ನಿಯತ್ತಿನ ವರದಿಗಾರರಿಗೆ ಸರಿಸಮಾನಾಗಿ ನಿಲ್ಲಲು ಸಾಧ್ಯವೇ?" ಹಾಗೂ ಪುನಃ ಫೆಬ್ರವರಿ 2015ರ ಪತ್ರಿಕೆಯ ಪುಟ-13 ರಲ್ಲಿ " ಮುಂದಿನ ಸಂಚಿಕೆಯಲ್ಲಿ ನಿರೀಕ್ಷಿಸಿ ಶಿವರಾಜ್ ಮತ್ತು ಮೋಹನಕುಮಾರ್ ಎಂಬ ನಕಲಿ ಪತ್ರಕರ್ತರ ಪುರಾಣ " ಎಂದು ಪ್ರಕಟಣೆ ಮಾಡಿ ಪಿರ್ಯಾದಿಯ ಮಾನಕ್ಕೆ ಹಾನಿಯನ್ನುಂಟು ಮಾಡಿರುತ್ತೀರಿ. ಆ ಮೂಲಕ ಭಾ. ದಂ. ಸಂ. ಕಲಂ 500ರನ್ವಯ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಆರೋಪಿಯಾದ ನೀವು ಮೇಲೆ ತಿಳಿಸಿದ ಸದರಿ ವಿಚಾರವು ಪಿರ್ಯಾದಿಯ ಮಾನಕ್ಕೆ ಹಾನಿಕರವೆಂದು ತಿಳಿದಿದ್ದರೂ ಕೂಡ ಸದರಿ ವಿಚಾರವನ್ನು ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿರುತ್ತೀರಿ. ಈ ಮೂಲಕ ಭಾ. ದಂ. ಸಂ. ಕಲಂ 501 ರನ್ವಯ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಆರೋಪಿಯಾದ ನೀವು ಮೇಲೆ ತಿಳಿಸಿದಂತೆ ಸುಳ್ಳು ಆರೋಪಗಳನ್ನು ಮಾಡಿ ಪಿರ್ಯಾದಿಯ ಮಾನಕ್ಕೆ ಹಾನಿಕರವೆಂದು ತಿಳಿದಿದ್ದರೂ ಸದರಿ ವಿಚಾರವನ್ನು ಪತ್ರಿಕೆಗಳಲ್ಲಿ ಪ್ರಕಟಣೆ ಮಾಡಿ ಮಾರಾಟ ಮಾಡಿ ಅವಮಾನ ಮಾಡಿರುತ್ತೀರಿ. ಈ ಮೂಲಕ ಭಾ. ದಂ. ಸಂ. ಕಲಂ 502 ರನ್ವಯ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಪ್ರಶ್ನೆ:- ಮೇಲೆ ಓದಿ ಹೇಳಿದ ಆಪಾದನೆಯು ಅರ್ಥವಾಯಿತೇ?

ಉತ್ತರ:: ಹೌದು

ಪ್ರಶ್ನೆ:- ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರೇ?ಅಥವಾ ವಿಚಾರಣೆಯಾಗಬೇಕೆ?

ಉತ್ತರ:: ಇಲ್ಲಾ, ವಿಚಾರಣೆಯಾಗಬೇಕು

(ಮೇಲಿನ ಆಪಾದನೆಯನ್ನು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡದಲ್ಲಿ ಓದಿ ಹೇಳಿ, ಅವರು ಅರ್ಥೈಸಿಕೊಂಡು ನೀಡಿದ ಉತ್ತರವನ್ನು ಸರಿಯಾಗಿ ನನ್ನ ಸ್ವ ಹಸ್ತದಿಂದ ಬರೆದುಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ)

ದಿ:28-12-2017

( ನಿರ್ಮಲ ಕೆ. )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ.